**ಎಸ್.ಸಿ.ಸಂಖ್ಯೆಃ 10047/2025**
**ಪ್ರಾ.ಸಾ.ಸಂಖ್ಯೆಃ 11**
**ಚಾ.ಸಾ.ಸಂಖ್ಯೆಃ 05**

**ಪೀಠಾಸೀನಾಧಿಕಾರಿಗಳು, 03 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ**

**ನ್ಯಾಯಾಧೀಶರು , ಬಾಗಲಕೋಟೆ, ಉಪಸ್ಥಿತಿಃ ಮುಧೋಳ**

**ಎಸ್.ಸಿ.ಸಂಖ್ಯೆಃ 10047/2025**

| | |
|---|---|
| ಹೆಸರುಃ | ರೂಪಾ ಮಾಂಗ ಅಲಿಯಾಸ ಮೇತ್ರಿ |
| ಗಂಡನ ಹೆಸರುಃ | ಶೇಖರ |
| ವಯಸ್ಸುಃ | 31 ವರ್ಷ |
| ಉದ್ಯೋಗಃ | ಗೃಹಿಣಿ |
| ವಾಸಃ | ಹಿರೇಕೆರಿ ಗಲ್ಲಿ, ಮುಧೋಳ |

**ಸಾಕ್ಷಿಯನ್ನು ದಿಃ 04.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ–**

1. ಈಗ ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯ ಇದೆ. ಚಾಸಾ–1 ನನ್ನ ಗಂಡ. ಚಾಸಾ–4 ನನ್ನ ಅತ್ತೆ. ಚಾಸಾ–6 ರಿಂದ 9 ಇವರ ಪರಿಚಯ ಇದೆ.

2. ದಿನಾಂಕಃ 26.02.2021 ನೇ ಇಸವಿಯಂದು ನನ್ನ ಗಂಡ ಶೇಖರ ಮನೆಗೆ ಬಂದು ಆರೋಪಿ 2 ತನಗೆ ಬೋಸಡಿ ಮಗ, ರಂಡಿ ಮಗ ಅಂತಾ ಹಣಕಾಸು ವಿಷಯದ ಬಗ್ಗೆ ಜಗಳ ತೆಗೆದು ಬೈಯ್ದುರು ಅಂತಾ ಹೇಳಿದರು. ಚಾಸಾ–4 ಮಾರನೇ ದಿವಸ ಬೆಳಗ್ಗೆ ಹಿರಿಯರಿಗೆ ಹೇಳೋಣ ಅಂತಾ

ಹೇಳಿದರು. ನಂತರ ಚಾಸಾ-4 ನನ್ನ ಅತ್ತೆ ಆರೋಪಿ 1, ಸದಾಶಿವ ಮೇತ್ರಿ, ಬಸು ಮೇತ್ರಿ ಹಾಗೂ ಭೀಮಶಿ ಮೇತ್ರಿ ಇವರಿಗೆ ಹೇಳಿ ಬಂದರು. ಅವರು ಕೂಡಿಸಿ ಮಾತನಾಡಿಸುತ್ತೇವೆ ಅಂತಾ ಹೇಳಿದರು.

3. ಅದೇ ದಿವಸ ಮಧ್ಯಾಹ್ನ 02.30 ಗಂಟೆ ಸಮಯದಲ್ಲಿ ನಾನು ಹಾಗೂ ನನ್ನ ಅತ್ತೆ ಚಾಸಾ-4 ಮನೆಯಲ್ಲಿ ಅಡುಗೆ ಮಾಡುತ್ತಿದ್ದೆವು. ನನ್ನ ಗಂಡ ಮಲಗಿದ್ದ. ಆಗ ಆರೋಪಿತರೆಲ್ಲರೂ ಬಂದು ಅಲ್ಲಿ ಬಂದರು. ಶೇಖರ ಎಲ್ಲಿದ್ದಾನೆ ಬೋಸಡಿ ಮಗ ಅಂತಾ ನನ್ನ ಅತ್ತೆಗೆ ಕೇಳಿದರು. ಚಾಸಾ-4 ಕೂಡಿ ಮಾತಾಡೋಣ ಅಂತಾ ಹೇಳಿತ್ತು, ಮತ್ತೆ ಏಕೆ ಬಂದಿರಿ ಅಂತಾ ಕೇಳಿದರು. ಆಗ ಆರೋಪಿ ಗಣಪತಿ ಹಾಗೂ ಕಾಳಪ್ಪ "ಇವಳದೇ ಹೆಚ್ಚು ಆಗಿದೆ ರಂಡಿಯದು ಅಂತಾ, ಇವಳನ್ನೇ ಮೊದಲು ಮುಗಿಸೋಣ" ಅಂತಾ ಅಂದು ಅವಳಿಗೆ ಬಡಿಗೆಯಿಂದ ಆರೋಪಿ 2 ಹೊಡೆದ.

4. ಆರೋಪಿ 1 ಅವಳ ಕುತ್ತಿಗೆ ಹಿಚುಕಿದ. ಸೀರೆ ಎಳೆದು ಕೆಳಗೆ ಹಾಕಿ ಬಡಿದ. ಆರೋಪಿ ಕಾಳಪ್ಪ ಚಾಸಾ-4 ಇವರಿಗೆ ಮೊಣಕಾಲಿಗೆ ಬಡಿಗೆಯಿಂದ ಹೊಡೆದ. ಆಗ ನನ್ನ ಗಂಡ ಎದ್ದು ಹೊರಗೆ ಬಂದು ಏಕೆ ಹೊಡೆಯುತ್ತೀರಿ ಅಂತಾ ಕೇಳಿದ. ಆಗ ಅವನನ್ನು ಕಾಳಪ್ಪ ಬಡಿಗೆಯಿಂದ ಹೊಡೆದ. ಆರೋಪಿ ಗಣಪತಿ ನನ್ನ ಗಂಡನ ಕುತ್ತಿಗೆ ಹಿಚುಕಿ ಹೊಟ್ಟೆಗೆ ಗುದ್ದಿದೆ. ನಾನು ಮಕ್ಕಳನ್ನು ಕರೆದುಕೊಂಡು ಚೀರಾಡಲು ಆರಂಭಿಸಿದೆ. ಆಗ ಓಣಿಯ ಜನರಾದ ಸೈದು

ಹಾಗೂ ಪರಶುರಾಮ ಚಾಸಾ–6 ಹಾಗೂ 7 ಇವರು ಬಂದು ಬಡಿಸಿಕೊಂಡರು. ಚಾಸಾ–6 ಹಾಗೂ 7 ಇವರು ಬಿಡಿಸಿಕೊಂಡಿದ್ದರಿಂದ ಉಳಿದುಕೊಂಡಿದ್ದೀರಿ ಇಲ್ಲದೇ ಹೋದರೆ ಕೊಂದು ಹಾಕುತ್ತಿದ್ದೆವು ಅಂತಾ ಬೆದರಿಕೆ ಹಾಕಿದರು.

5. ನನ್ನ ಗಂಡ ಹಾಗೂ ಅತ್ತೆಯವರನ್ನು ಮುಧೋಳದ ಸರ್ಕಾರಿ ಆಸ್ಪತ್ರೆಗೆ ಸೇರಿಸಿದ್ದೆವು. ಈಗ ನಾನು ನೋಡುತ್ತಿರುವ ಮು.ಮಾ. 1 ಆರೋಪಿತರು ಹೊಡೆಯಲು ಉಪಯೋಗಿಸಿದ ಕಟ್ಟಿಗೆ ಇರುತ್ತದೆ. ನಾನು ಈ ಬಗ್ಗೆ ಪೋಲೀಸರ ಮುಂದೆ ಹೇಳಿಕೆ ನೀಡಿದ್ದೇನೆ.

**<u>ಪಾಟೀ ಸವಾಲುಃ 2 ರಿಂದ 4ನೇ ಆರೋಪಿತರ ಪರವಾಗಿ ಶ್ರೀ. ಎಸ್.ಸಿ.ಎಚ್. ವಕೀಲರಿಂದಃ</u>**

1. ನಮ್ಮ ಮನೆ ಆಶ್ರಯ ಯೋಜನೆಯಲ್ಲಿ ಮಂಜೂರಾದ ಮನೆಯಾಗಿದ್ದು ಅದಕ್ಕೆ ಒಂದೇ ಕೋಣೆ ಇದೆ ಎಂದರೆ ಸರಿ. ನಾನು, ನನ್ನ ಅತ್ತೆ ಅಡುಗೆ ಮಾಡುತ್ತಿರುವಾಗ ನನ್ನ ಗಂಡ ಅದೇ ಕೋಣೆಯಲ್ಲಿಯೇ ಮಲಗಿದ್ದ. ಆರೋಪಿತರು ಮನೆಯ ಹೊರಗಡೆ ಬಂದಿದ್ದರು. ಆರೋಪಿತರು ಹೊರಗಿನಿಂದಲೇ ಶೇಖರ ಅಂತಾ ಕರೆದರು. ನಾವು ಅಲ್ಲಿಯೇ ಹೊರಗಡೆ ಅಡುಗೆ ಮಾಡುತ್ತಿದ್ದೆವು.

2. ಆರೋಪಿ 2 ನನ್ನ ಅತ್ತೆಯ ಎಡಗಾಲಿಗೆ ಹೊಡೆದರು. ಕಾಳಪ್ಪ ಕೈಯಲ್ಲಿ ಮಾತ್ರ ಬಡಿಗೆ ಇತ್ತು, ಉಳಿದವರ ಕೈಯಲ್ಲಿ ಏನೂ ಇರಲಿಲ್ಲ. ನನ್ನ ಅತ್ತೆ ಕೆಳಗೆ ಬಿದ್ದಾಗ ಆರೋಪಿ 2 ಕೈಯಿಂದ ಕುತ್ತಿಗೆ ಹಿಚುಕಲು ಪ್ರಯತ್ನಿಸಿದ. ನನ್ನ ಅತ್ತೆಯ ಎಡರಟ್ಟೆಗೆ ಅವಳು ಬಿದ್ದುದರಿಂದ ಗಾಯ ಆಗಿತ್ತು. ನನ್ನ ಅತ್ತೆಗೆ ಉಗುರಿನಿಂದ ಚೂರಿದ ಗುರುತುಗಳಾಗಿದ್ದವು. ರಕ್ತಗಾಯ ಆಗಿದ್ದನ್ನು ನಾನು ನೋಡಿಲ್ಲ. ನನಗೆ ಯಾವುದೇ ಏಟುಗಳು ಬಿದ್ದಿಲ್ಲ. ನನ್ನ ಅತ್ತೆಗೆ ಘಟನೆಯಾದ ನಂತರ ಸ್ವಲ್ಪ ಪ್ರಜ್ಞೆ ಹೋಗಿತ್ತು. ಆರೋಪಿತರು ಬಂದ ಕೂಡಲೇ ನನ್ನ ಗಂಡ ಹೊರಗಡೆ ಬಂದಿದ್ದರು.

3. ನನ್ನ ಗಂಡ ಬಿಡಿಸಿಕೊಳ್ಳಲು ಪ್ರಯತ್ನಿಸಿದ ಆಗ ಆರೋಪಿ ಅರುಣ ಹಾಗೂ ಆನಂದ ಅವರನ್ನು ಹಿಡಿದುಕೊಂಡು ನಿಂತರು. ಆರೋಪಿತರು ಚಾಸಾ–4 ಇವಳಿಗೆ ಹೊಡೆದ ಕೂಡಲೇ ನಾವು ಬಾಯಿ ಮಾಡಿದೆವು. ಆಗ ಓಣಿಯ ಮಂದಿ ಬಂದು ಬಿಡಿಸಿದರು. ನನ್ನ ಗಂಡನಿಗೆ ಹೊಟ್ಟೆಗೆ ಹಾಗೂ ಕುತ್ತಿಗೆಗೆ ಗಾಯಗಳಾಗಿದ್ದವು. ನನ್ನ ಗಂಡನಿಗೆ ಪ್ರಜ್ಞೆ ಹೋಗಿಲ್ಲ. ಆರೋಪಿತರು 02.30 ಗಂಟೆಗೆ ಬಂದಿದ್ದು 04.30 ಗಂಟೆಯವರೆಗೆ ಜಗಳ ಆಗಿದೆ. ಆರೋಪಿತರು ಬಂದು ಜಗಳ ಆರಂಭವಾದ ಕೂಡಲೇ ಪೋಲೀಸರಿಗೆ ಫೋನ ಮುಖಾಂತರ ಕರೆಯಲು ಪ್ರಯತ್ನಿಸಲಿಲ್ಲ.

4. ನಮ್ಮ ಮನೆಯ ಹತ್ತಿರದಲ್ಲಿಯೇ ಪೋಲೀಸ ಹೊರ ಠಾಣೆ ಇದೆ ಎಂದರೆ ಸರಿ. ಘಟನಾ ಸ್ಥಳಕ್ಕೆ ಆಗ ಪೋಲೀಸರು ಬಂದಿರಲಿಲ್ಲ. ಚಾಸಾ-9 ನಮ್ಮ ಮನೆಗೆ ಬಂದಿದ್ದು ಮೋಟಾರು ಸೈಕಲ ಮೇಲೆ ನನ್ನ ಗಂಡ ಹಾಗೂ ಅತ್ತೆಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು. ಅವರು ಸ್ಥಳಕ್ಕೆ ಬಂದಾಗ 04.30 ರಿಂದ 05.00 ಗಂಟೆಯಾಗಿರಬಹುದು. ನನ್ನ ಗಂಡ ಹಾಗೂ ಅತ್ತೆ ಆಸ್ಪತ್ರೆಗೆ ಹೋದಾಗ ಸಾಯಂಕಾಲ 05.00 ಗಂಟೆ ಆಗಿರಬಹುದು.

5. ನನ್ನ ಅತ್ತೆ 15 ದಿವಸಗಳ ಕಾಲ ಆಸ್ಪತ್ರೆಯಲ್ಲಿ ದಾಖಲಾಗಿದ್ದರು. ನನ್ನ ಗಂಡ ಎರಡು ದಿವಸಗಳ ಕಾಲ ಆಸ್ಪತ್ರೆಯಲ್ಲಿ ದಾಖಲಾಗಿದ್ದರು. ಘಟನೆಯಾದ ಮಾರನೇ ದಿವಸ ಪೋಲೀಸರು ನನ್ನ ಹೇಳಿಕೆ ಪಡೆದುಕೊಂಡರು. ಆಗ ಮದ್ಯಾಹ್ನ 12.00 ಗಂಟೆ ಆಗಿರಬಹುದು. ಸಮಯ ನಿರ್ಧಿಷ್ಟವಾಗಿ ನೆನಪಿಲ್ಲ. ನನ್ನ ಗಂಡನಿಗೆ ಆರೋಪಿ 2 ಕಾಳಪ್ಪ ಬಡಿಗೆಯಿಂದ ಹೊಡೆದ ಬಗ್ಗೆ, ಆರೋಪಿ 1 ನನ್ನ ಗಂಡನ ಕುತ್ತಿಗೆ ಹಿಚುಕಿದ ಬಗ್ಗೆ ನಾನು ಪೋಲೀಸರಿಗೆ ನೀಡಿದ ಹೇಳಿಕೆಯಲ್ಲಿ ಹೇಳಿಲ್ಲ.

6. ನನ್ನ ಗಂಡ ಆರೋಪಿ 2 ಕಾಳಪ್ಪ ಈತನಿಗೆ ಗಲ್ಲಕ್ಕೆ ಚಾಕುವಿನಿಂದ ಹೊಡೆದು ಗಾಯಪಡಿಸಿದ್ದ ಎಂದರೆ ಸರಿಯಲ್ಲ. ಅವನನ್ನು ಕುಬಸದ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲು ಮಾಡಲಾಗಿತ್ತು ಎಂದರೆ ಸರಿಯಲ್ಲ. ಆರೋಪಿ 2 ನನ್ನ ಗಂಡನ ವಿರುದ್ಧ ದೂರು ಕೊಡಲಾರದಂತೆ ಕೇಳುವ ಸಲುವಾಗಿ ನನ್ನ ಅತ್ತೆ

ಹಿರಿಯರಾದ ಆರೋಪಿ 1, ಹಾಗೂ ಇತರೇ ಹಿರಿಯರ ಮನೆಗೆ ಹೋಗಿದ್ದಳು ಎಂದರೆ ಸರಿಯಲ್ಲ.

7. ಆರೋಪಿ 1 ಸದರಿ ವ್ಯವಹಾರದಲ್ಲಿ ಭಾಗವಹಿಸಲು ನಿರಾಕರಿಸಿದರು ಎಂದರೆ ಸರಿಯಲ್ಲ. ಆರೋಪಿ 2 ತನ್ನ ಮೇಲೆ ದೂರು ಕೊಡುತ್ತಾನೆ ಎನ್ನುವ ಕಾರಣದಿಂದ ನನ್ನ ಗಂಡ ಹಾಗೂ ಅತ್ತೆ ಸೇರಿ ಸುಳ್ಳು ದೂರು ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ಗಂಡನ ಮೇಲೆ ಆರೋಪಿ 2 ನೀಡಿದ ಒಂದು ದೂರು ಚಾಲ್ತಿಯಲ್ಲಿದೆ ಎಂದರೆ ಸರಿ. ಆರೋಪಿ 2 ಈತನ ಪ್ರಕರಣದಲ್ಲಿ ನನ್ನ ಗಂಡನಿಗೆ ಸಹಾಯ ಮಾಡುವ ಉದ್ದೇಶದಿಂದ ಆರೋಪಿತರ ವಿರುದ್ಧ ಈ ಪ್ರಕರಣದಲ್ಲಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

8. ನಾನು ಮುಖ್ಯ ಸಾಕ್ಷಿಯಲ್ಲಿ ಹೇಳಿದಂತೆ ಆರೋಪಿತರು ನಮ್ಮ ಮನೆಗೆ ಬಂದಿಲ್ಲ, ನನ್ನ ಗಂಡ ಅಥವಾ ಅತ್ತೆಯ ಮೇಲೆ ಹಲ್ಲೆ ಮಾಡಿಲ್ಲ, ಕೊಲೆ ಮಾಡಲು ಪ್ರಯತ್ನಿಸಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಬಿಡಿಸಲು ಬಂದ ಅಂತಾ, ಆಗ ಆರೋಪಿ 3 ಹಾಗೂ 4 ಅವನಿಗೂ ಕೂಡ ಕೋಲಿನಿಂದ ಹಲ್ಲೆ ಮಾಡಿದರು ಅಂತಾ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಚಾಸಾ-6 ಹಾಗೂ 7 ಬಂದು ಜಗಳ ಬಿಡಿಸಿಕೊಂಡರು ಅಂತಾ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಮು.ಮಾ. 1 ಎಲ್ಲ ಕಡೆಗೆ ಸಿಗುತ್ತದೆ ಎಂದರೆ ಸರಿ. ಮು.ಮಾ. 1 ರಿಂದಲೇ ನಮ್ಮ ಮೇಲೆ ಹಲ್ಲೆ ಮಾಡಿದ್ದಾರೆ ಅಂತಾ ಸುಳ್ಳು

ಹೇಳಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** 1 ನೇ ಆರೋಪಿತರ ಪರವಾಗಿ ಶ್ರೀ. ಎಸ್.ಐ.ಎಚ್. ವಕೀಲರು ಅದೇ ಪಾಟೀ ಸವಾಲನ್ನು ಅನ್ವಯಿಸಿಕೊಳ್ಳುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ. ಸರಿ ಅದೆ.**

Sd/-

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮುಧೋಳ.**